| | |
|---|---|
| <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ. ನಂ.**1/2021** | |
| ಚಾಸಾ - **12** | |
| ಪ್ರಾಸಾ - **10** | |
| ಸಾಕ್ಷಿದಾರರ ಹೆಸರು | ಗಂಗಾರಾಮ ರಾಠೋಡ |
| ತಂದೆ/ಗಂಡ/ತಾಯಿ ಹೆಸರು | ಚೋಕು |
| ವಯಸ್ಸು | **54** ವರ್ಷ |
| ಉದ್ಯೋಗ | ಶಿಕ್ಷಕ |
| ವಾಸಸ್ಥಳ | ಚಿಕ್ಕಪಡಸಲಗಿ. |

ಇಂದು ದಿನಾಂಕ 31.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜನವಾಡದಲ್ಲಿ 2010 ರಿಂದ 2020 ರವರೆಗೆ ಸಹಶಿಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಆ ಸಮಯದಲ್ಲಿ ಚಾಸಾ-1 ರವರು ಬಿ.ಇ.ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಲ್ಲಾ ಶಿಕ್ಷಕರು ಮಾತನಾಡುತ್ತಿದ್ದುದರಿಂದ ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ ಎಂದು ನನ್ನ ಸಂಬಂಧಿಕರು ನಿಮ್ಮ ಖಾತೆಗೆ ಹಣ ಹಾಕಿದ್ದು ಅದನ್ನು ತೆಗೆದುಕೊಡಿ ಎಂದು ಹೇಳಿದ್ದು ಗೊತ್ತಾಗಿದೆ. ನನ್ನ ಖಾತೆಗೆ ರೂ.25,000-00 ಗಳನ್ನು ದಿನಾಂಕ 12.01.2018 ರಂದು ಆರೋಪಿ ಹಣ ಹಾಕಿದ್ದಾರೆ. ನನಗೆ ಆರೋಪಿ ಫೋನ್ ಮಾಡಿ ತನ್ನ ಸಂಬಂಧಿಕರು ತಪ್ಪಾಗಿ ನಿಮ್ಮ ಖಾತೆಗೆ ಹಣ ಹಾಕಿದ್ದು, ಮರಳಿ ಕೊಡಿ ಎಂದು ನನಗೆ ಹೇಳಿದ್ದಾನೆ. ನಾನು 2 ದಿನ ಬಿಟ್ಟು ತೆಗೆದು ಕೊಡುತ್ತೇನೆ ಎಂದು ಹೇಳಿದ್ದೇನೆ. ನಂತರ ಚಾಸಾ-1 ರವರು ನನ್ನ ಖಾತೆಗೆ ಯಾವ ರೀತಿಯಾಗಿ ಹಣ ಬಂದಿದೆ ಎಂದು ಕೇಳಿದ್ದಾರೆ. ಅದೇ ರೀತಿ ಜಾನಮಟ್ಟಿ, ಕುಲಕರ್ಣಿ ಮತ್ತು ಇನ್ನುಳಿದ ಶಿಕ್ಷಕರ ಖಾತೆಗೆ ಇದೇ ರೀತಿ ಹಣ ಖಾತೆಗೆ ಹೋಗಿದೆ ಎಂದು ಹೇಳಿದ್ದಾರೆ. ಆರೋಪಿ ನನ್ನ ಗಳಿಕೆ ರಜೆಯನ್ನು ಮತ್ತೊಬ್ಬರಿಗೆ ಹಾಕಿ ಮತ್ತೊಬ್ಬರ ಗಳಿಕೆ ರಜೆಯನ್ನು ನನಗೆ ಹಾಕಿದ್ದಾನೆ. ನಾನು ನನ್ನ ಖಾತೆಗೆ ಹಾಕಿದಂತಹ ಹಣವನ್ನು ಆರೋಪಿಗೆ ಮರಳಿ ಕೊಟ್ಟಿದ್ದೇನೆ. ಚಾಸಾ-1 ರವರು ನಮ್ಮ ಕಡೆಯಿಂದ ಪತ್ರವನ್ನು ಲಿಖಿತ ರೂಪದಲ್ಲಿ ಬರೆಸಿಕೊಂಡಿದ್ದಾರೆ. ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>

ದಿನಾಂಕ 12.01.2018 ರಂದು ನನ್ನ ಖಾತೆಗೆ ಆರೋಪಿ ರೂ.20,000-00 ಗಳನ್ನು ಹಾಕಿದ್ದಾನೆ ಎಂದರೆ ಸರಿ. ಆರೋಪಿ ಹೇಳಿದ್ದರ ಮೇರೆಗೆ ನಾನು ಆತನನ್ನು ನಂಬಿ ರೂ.20,000-

00 ಗಳನ್ನು ಮರಳಿ ಆರೋಪಿಗೆ ಕೊಟ್ಟಿದ್ದೇನೆ. ಚಾಸಾ-6 ರಿಂದ ಚಾಸಾ-15 ರವರ ಖಾತೆಗೂ ಸಹ ಇದೇ ರೀತಿ ಆರೋಪಿ ಹಣವನ್ನು ಹಾಕಿ ಅವರಿಗೂ ಸಹ ನನ್ನಂತೆ ಫೋನ್ ಮಾಡಿ ಮರಳಿ ಹಣ ಪಡೆದುಕೊಂಡಿದ್ದ ಎಂದರೆ ಸರಿ. ಈ ವಿಷಯವನ್ನು ಚಾಸಾ-1 ಇವರಿಗೆ ತಿಳಿಸಿದ್ದೇವೆ ಎಂದರೆ ಸರಿ. ಆರೋಪಿ ಯಾವುದೇ ಶಿಕ್ಷಕರಿಂದ ಗಳಿಕೆ ರಜೆಯ ಅರ್ಜಿಯನ್ನು ಪಡೆಯದೇ ಗಳಿಕೆ ರಜೆಯ ಬಿಲ್ಲನ್ನು ಮತ್ತು ಬಾಕಿ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಮ್.ಎಸ್. ತಂತ್ರಾಂಶಕ್ಕೆ ಅಳವಡಿಸಿ ಸರಕಾರಿ ಟೋಕನ್ ನಂ.416/17-18, ಓ.ಜಿ. ನಂ.000994051 ಬಳಸಿ ಅಪ್ರೂವಲ್ ಸಂಖ್ಯೆ 2812201179337825 ಹಾಗೂ ಸರಕಾರಿ ಟೋಕನ್ ಸಂಖ್ಯೆ 269/17-18 ಬಳಸಿ ಶಾಖಾಧಿಕಾರಿಗಳ ಗಮನಕ್ಕೆ ತರದೇ ಪೂರ್ಣ ಬಿಲ್ಲನ್ನು ಸೃಷ್ಠಿ ಮಾಡಿ ಜಮಖಂಡಿ ಉಪಖಜಾನೆಗೆ ದಿನಾಂಕ 28.12.2017 ರಂದು ಮತ್ತು ದಿನಾಂಕ 15.09.2017 ರಂದು ಖೊಟ್ಟಿ ಚೆಕ್‌ನ್ನು ಪಡೆದುಕೊಂಡು ನನ್ನ ಬ್ಯಾಂಕ್ ಖಾತೆಗೆ ರೂ.20,000-00 ಗಳನ್ನು ಹಾಕಿದ್ದಾರೆ ಎಂದರೆ ಸರಿ. ಅದೇ ರೀತಿ ಚಾಸಾ-6 ರಿಂದ ಚಾಸಾ-14ರವರ ಖಾತೆಗೆ ಹಣ ಜಮಾ ಆಗಿದೆ ಎಂದು ಚಾಸಾ-1 ಇವರಿಗೆ ತಿಳಿಸಿದ್ದೇವೆ ಎಂದರೆ ಸರಿ. ನಂತರ ಚಾಸಾ-1 ಇವರು ದೂರು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಚಾಸಾ-1 ರವರ ಸಹಿಗಳು ಇದ್ದವು ಎಂದರೆ ಸರಿ. ಸದರಿಯವರು ತನ್ನ ಸಹಿಗಳು ಇರಬಹುದು ಎಂದು ಒಪ್ಪಿಕೊಂಡಿದ್ದರು ಎಂದರೆ ಸರಿ. ಚಾಸಾ-1 ರವರ ಒಪ್ಪಿಗೆ ಪಡೆಯದೇ ಆರೋಪಿ ಖೊಟ್ಟಿ ಬಿಲ್ಲುಗಳನ್ನು ತಯಾರಿಸಿ ಹಣವನ್ನು ಎತ್ತಿ ಹಾಕಿದ್ದಾನೆ ಎಂದರೆ ಸರಿ. ಇದೇ ರೀತಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ.

ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್.ಹೆಚ್.ಕೆ. ವಕೀಲರಿಂದಃ-

ನಾನು ನನ್ನ ಕೆಲಸದ ಅವಧಿಯಲ್ಲಿ ಹಲವು ಬಾರಿ ಗಳಿಕೆ ರಜೆಯ ನಗದೀಕರಣ ಮಾಡಿಕೊಂಡಿದ್ದೇನೆ ಎಂದರೆ ಸರಿ. ಅದೇ ರೀತಿ ಬಾಕಿ ಹಣವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾವು ಗಳಿಕೆ ರಜೆ ನಗದೀಕರಣಕ್ಕಾಗಿ ಕ್ಲರ್ಕಗೆ ಕೊಡುತ್ತೇವೆ. ನಾವು ಕೊಟ್ಟಂತಹ ಅರ್ಜಿ ಆವಕ ಜಾವಕ ಪುಸ್ತಕದಲ್ಲಿ ನಮೂದು ಆಗುತ್ತದೆ. ಅದನ್ನು ನೋಡಿಕೊಂಡು ಬಿಲ್ಲುಗಳನ್ನು ತಯಾರಿಸುತ್ತಾರೆ ಎಂದರೆ ಸರಿ. ಅರ್ಜಿಯನ್ನು ಕೊಟ್ಟವರ ಬಿಲ್ಲನ್ನು ಮಾತ್ರ ತಯಾರಿಸುತ್ತಾರೆ ಎಂದರೆ ಸರಿ. ಅರ್ಜಿಯನ್ನು ಕೊಟ್ಟವರ ಬಿಲ್ಲನ್ನು ತಯಾರಿಸಿ ಖಜಾನೆಗೆ ಕಳುಹಿಸುತ್ತಾರೆ ಎಂದರೆ ಸರಿ. ಖಜಾನೆಗೆ ಕಳುಹಿಸುವಾಗ ಬಿ.ಇ.ಓ ರವರು ಸಹಿ ಹಾಕುತ್ತಾರೆ. ಸದರಿ ಸಹಿಯನ್ನು ನೋಡಿ ಖಜಾನೆ ಅಧಿಕಾರಿಗಳು ಬಿಲ್ಲನ್ನು ಪಾಸು ಮಾಡುತ್ತಾರೆ ಎಂದರೆ ಸರಿ. ಬಟವಾಡೆ ಮಾಡುವ ಅಧಿಕಾರಿಯ ಮಾದರಿ ಸಹಿಗಳು ಖಜಾನೆಯಲ್ಲಿ ಇರುತ್ತವೆ ಎಂದರೆ ಸರಿ. ಬಟವಾಡೆ ಮಾಡಮ

ಅಧಿಕಾರಿಗಳು ಯಾವ ಬಿಲ್ಲಿಗೆ ಸಹಿ ಮಾಡುತ್ತಿದ್ದೇನೆ ಎಂದು ಪರಿಶೀಲನೆ ಮಾಡಿ ನಂತರ ಸಹಿ ಮಾಡುತ್ತಾರೆ ಎಂದರೆ ಸರಿ.

ಗಳಿಕೆ ರಜೆಯ ನಗದೀಕರಣಕ್ಕಾಗಿ ನಾವು ಅರ್ಜಿಯನ್ನು ಕೊಟ್ಟಿರಲಿಲ್ಲ. ಅರ್ಜಿ ಕೊಟ್ಟಂತಹ ಶಿಕ್ಷಕರ ಗಳಿಕೆ ರಜೆಯನ್ನು ಮಾತ್ರ ಬಿಲ್ ಮಾಡಿದ್ದಾರೆ ಎಂದರೆ ಸರಿ. 15 ಜನರ ಖಾತೆಗಳಿಗೆ ನೇರವಾಗಿ ಹಣ ಜಮಾ ಆಗಿದೆ ಎಂದರೆ ಸರಿ. ನಾವು ಅರ್ಜಿಯನ್ನು ಕೊಡದೇ ಇದ್ದಾಗ ಸದರಿ ಹಣ ಸರಕಾರಕ್ಕೆ ಮರಳಿ ಹೋಗುತ್ತದೆ ಎಂದರೆ ಸರಿ. ನನ್ನ ಮತ್ತು ಉಳಿದ ಶಿಕ್ಷಕರ ಖಾತೆಗೆ ಹಣ ಹಾಕಿದ್ದ ಎಂದು ಹೇಳುವುದು ವೈಯಕ್ತಿಕ ವ್ಯವಹಾರಗಳಾಗಿದ್ದವು ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಫೋನ್ ಮಾಡಿ ತನ್ನ ಸಂಬಂಧಿಕರು ನನ್ನ ಖಾತೆಗೆ ಹಣ ಹಾಕಿದ್ದು ಮರಳಿ ಕೊಡಲು ಕೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ

| | |
|---|---|
| **<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u>** | |
| **ಸಿ.ಸಿ. ನಂ.1/2021** | |
| **ಚಾಸಾ - 14** | |
| **ಪ್ರಾಸಾ - 11** | |
| **ಸಾಕ್ಷಿದಾರರ ಹೆಸರು** | **ಚನ್ನಪ್ಪ ಜಾನಮಟ್ಟಿ** |
| **ತಂದೆ/ಗಂಡ/ತಾಯಿ ಹೆಸರು** | **ಅಣ್ಣಪ್ಪ** |
| **ವಯಸ್ಸು** | **48 ವರ್ಷ** |
| **ಉದ್ಯೋಗ** | **ಶಿಕ್ಷಕ, ಹೆಚ್.ಪಿ.ಎಸ್. ಜನವಾಡ,** |
| **ವಾಸಸ್ಥಳ** | **ಜನವಾಡ.** |

ಇಂದು ದಿನಾಂಕ 31.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>

ನಾನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಜನವಾಡದಲ್ಲಿ 2017 ರಿಂದ ಇಲ್ಲಿಯವರೆಗೆ ಸಹಶಿಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಆರೋಪಿ ನನ್ನ ಖಾತೆಗೆ ರೂ.20,000-00 ಗಳನ್ನು ದಿನಾಂಕ 12.01.2018 ರಂದು ಹಾಕಿದ್ದ. ಆರೋಪಿ ತನ್ನ ಸ್ನೇಹಿತರು ನನ್ನ ಖಾತೆಗೆ ರೂ.20,000-00 ಗಳನ್ನು ಹಾಕಿದ್ದಾರೆ ಅದನ್ನು ತೆಗೆದುಕೊಡಿ ಎಂದು ಹೇಳಿದರು. ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ಹಣವನ್ನು ತೆಗೆದುಕೊಡಲು ಹೇಳಿದ್ದ. ಆರೋಪಿ ಹೇಳಿದ ಮೇರೆಗೆ ನಾನು ಹಣವನ್ನು ತೆಗೆದುಕೊಟ್ಟಿದ್ದೇನೆ. ನಾವೆಲ್ಲಾ ಶಿಕ್ಷಕರು ಚಾಸಾ-1 ರವರ ಕಚೇರಿಗೆ ಹೋಗಿ ಯಾವ ಹಣ ಎಂದು ವಿಚಾರಣೆ ಮಾಡಿದ್ದೇವೆ. ಸದರಿ ಹಣವನ್ನು ಬೇರೆ ಶಿಕ್ಷಕರ ಗಳಿಕೆ ರಜೆಯ ಹಣ ಮತ್ತು ಬಾಕಿ ಹಣವನ್ನು ಹಾಕಿದ್ದಾರೆಂದು ತಿಳಿಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| ಸಿ.ಸಿ. ನಂ.**1/2021** | |
| ಚಾಸಾ - **15** | |
| ಪ್ರಾಸಾ - **12** | |
| ಸಾಕ್ಷಿದಾರರ ಹೆಸರು | ನಾರಾಯಣ ಕುಲಕರ್ಣಿ |
| ತಂದೆ/ಗಂಡ/ತಾಯಿ ಹೆಸರು | ರಾಘವೇಂದ್ರ |
| ವಯಸ್ಸು | **47 ವರ್ಷ** |
| ಉದ್ಯೋಗ | **ಸಹಶಿಕ್ಷಕ, ಎಮ್.ಪಿ.ಎಸ್. ನಂ.1 ಜಮಖಂಡಿ.** |
| ವಾಸಸ್ಥಳ | **ಜಮಖಂಡಿ.** |

ಇಂದು ದಿನಾಂಕ 31.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ನಾನು 2016 ರಿಂದ 2022 ರವರೆಗೆ ಸಿ.ಆರ್.ಸಿ. ತೊದಲಬಾಗಿ ಕ್ಲಸ್ಟರ ವಿಭಾಗದಲ್ಲಿ ಸಂಪನ್ಮೂಲ ವ್ಯಕ್ತಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 26.12.2017 ರಂದು ನಾನು ಜಮಖಂಡಿಯಲ್ಲಿದ್ದಾಗ ಆರೋಪಿ ನನಗೆ ಫೋನ್ ಮಾಡಿ ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲ ಮತ್ತು ನಾನು ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದೇನೆ, ನನ್ನ ಸ್ನೇಹಿತ ನಿಮ್ಮ ಖಾತೆಗೆ ರೂ.30,000-00 ಗಳನ್ನು ಹಾಕಿದ್ದಾನೆ, ಅದನ್ನು ಬೇಗ ತೆಗೆದುಕೊಟ್ಟರೆ ನನಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾನೆ. ನಾನು ಆರೋಪಿಗೆ ರೂ.30,000-00 ಗಳಿಗೆ ಸಂಬಂಧಪಟ್ಟಂತೆ ಚೆಕ್‌ನ್ನು ಕೊಟ್ಟಿದ್ದೇನೆ. ಸದರಿ ಹಣವನ್ನು ದಿನಾಂಕ 30.12.2017 ರಂದು ಆರೋಪಿ ಚೆಕ್‌ನ್ನು ನಗದೀಕರಣಗೊಳಿಸಿಕೊಂಡಿದ್ದಾನೆ. ನಂತರ ಚಾಸಾ-1 ಇವರು ನಿಮ್ಮ ಬೇಡಿಕೆ ಇಲ್ಲದೇ ನಿಮ್ಮ ಖಾತೆಗೆ ಆರೋಪಿ ಹಣ ಹಾಕಿದ್ದಾನೆಂದು ತಿಳಿಸಿದ್ದಾನೆ. ಯಾರು ಯಾರಿಗೆ ಆ ರೀತಿ ಆಗಿತ್ತೊ ಎಲ್ಲರೂ ಸೇರಿ ಚಾಸಾ-1 ರವರ ಕಚೇರಿಗೆ ಹೋಗಿದ್ದೇವೆ. ದಿನಾಂಕ 03.03.2018 ರಂದು ಚಾಸಾ-1 ರವರು ಪ್ರಥಮ ವರ್ತಮಾನ ಹೇಳಿಕೆಯನ್ನು ಕೊಟ್ಟಿದ್ದಾರೆ. ನಂತರ ನನ್ನನ್ನು ಪೋಲೀಸರು ವಿಚಾರಣೆ ಮಾಡಿದ್ದಾರೆ. ಗಳಿಕೆ ರಜೆಯ ನಗದೀಕರಣಕ್ಕಾಗಿ ನಾನು ಅರ್ಜಿಯನ್ನು ಕೊಡದಿದ್ದರೂ ಸಹ ಗಳಿಕೆ ರಜೆಯ ನಗದೀಕರಣವನ್ನು ಮಾಡಿದ್ದರು. ಈ ರೀತಿ ಸುಮಾರು 10-11 ಶಿಕ್ಷಕರಿಗೆ ಸಂಬಂಧಿಸಿದಂತೆ ಗಳಿಕೆ ರಜೆಯ ನಗದೀಕರಣವನ್ನು ಮಾಡಿದ್ದರು.

**ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್.ಹೆಚ್.ಕೆ. ವಕೀಲರಿಂದಃ-**

ನಾನು ಅರ್ಜಿ ಕೊಟ್ಟಿದ್ದರ ಮೇರೆಗೆ ನನ್ನ ಗಳಿಕೆ ರಜೆಯ ಹಣ ನಗದೀಕರಣಗೊಂಡಿತ್ತು ಎಂದರೆ ಸರಿ. ಗಳಿಕೆ ರಜೆಯನ್ನು ನಗದೀಕರಣ ಮಾಡುವುದಕ್ಕೆ ಮತ್ತು ಬಾಕಿ ಬಿಲ್ಲನ್ನು ಮಾಡುವುದಕ್ಕೆ ಅದಕ್ಕೆ ಆದ ಕ್ರಮ ಇದೆ ಎಂದರೆ ಸರಿ. ಮೊದಲು ನಾವು ಅರ್ಜಿಯನ್ನು ಬಟವಾಡೆ

ಮಾಡುವ ಅಧಿಕಾರಿಗೆ ಕೊಡಬೇಕಾಗುತ್ತದೆ. ನಾವು ಕೊಟ್ಟಂತಹ ಅರ್ಜಿಯನ್ನು ರಜಿಸ್ಟರನಲ್ಲಿ ನಮೂದಿಸಿಕೊಂಡಿರುತ್ತಾರೆ. ರಜಿಸ್ಟರನಲ್ಲಿ ನಮೂದು ಮಾಡಿರುವ ಅರ್ಜಿಗಳನ್ನು ನಗದೀಕರಣ ಮಾಡುತ್ತಾರೆ ಎಂದರೆ ಸರಿ. ಅರ್ಜಿಗಳನ್ನು ತಯಾರಿಸಿದ ನಂತರ ಬಿಲ್ಲನ್ನು ತಯಾರಿಸಿ ಬಿಲ್ಲನ್ನು ಖಜಾನೆಗೆ ಕಳುಹಿಸುತ್ತಾರೆ ಎಂದರೆ ಸರಿ. ಸದರಿ ಬಿಲ್ಲಿಗೆ ಬಟವಾಡೆ ಮಾಡುವ ಅಧಿಕಾರಿಯವರ ಸಹಿ ಇರುತ್ತದೆ ಎಂದರೆ ಸರಿ. ಸದರಿ ಸಹಿಯನ್ನು ಪರಿಶೀಲನೆ ಮಾಡಿ ಖಜಾನೆ ಅಧಿಕಾರಿಗಳು ಬಿಲ್ ಪಾಸು ಮಾಡುತ್ತಾರೆ ಎಂದರೆ ಸರಿ. ಸಂಬಳ ಬಟವಾಡೆ ಮಾಡುವ ಅಧಿಕಾರಿಯವರ ಮಾದರಿ ಸಹಿಗಳು ಖಜಾನೆಯಲ್ಲಿ ಇರುತ್ತದೆ ಎಂದರೆ ಸರಿ. ಬಿಲ್ಲನ್ನು ತಯಾರಿಸಿದ ನಂತರ ಬಟವಾಡೆ ಮಾಡುವ ಅಧಿಕಾರಿ ಅದನ್ನು ಪರಿಶೀಲನೆ ಮಾಡಿ ಸಹಿ ಹಾಕುತ್ತಾರೆ ಎಂದರೆ ಸರಿ. ತಯಾರಿಸಿದ ಬಿಲ್ಲು ಸರಿಯಾಗಿದೆಯೋ ಇಲ್ಲವೋ ಎಂದು ಬಟವಾಡೆ ಮಾಡುವ ಅಧಿಕಾರಿ ಪರಿಶೀಲನೆ ಮಾಡುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

10-11 ಶಿಕ್ಷಕರ ಖಾತೆಗೆ ಬಂದಂತಹ ಹಣಕ್ಕೆ ಅವರು ಅರ್ಹರಿದ್ದರೋ ಇಲ್ಲವೋ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಅರ್ಜಿಗಳನ್ನು ಕೊಟ್ಟಿದ್ದರ ಮೇರೆಗೆ ಬಿಲ್ಲು ತಯಾರಿಸಿ ಖಜಾನೆಗೆ ಕಳುಹಿಸಿದ್ದು, ಖಜಾನೆಯವರು ನೇರವಾಗಿ ಸದರಿ ಶಿಕ್ಷಕರ ಖಾತೆಗೆ ಹಣ ಜಮಾ ಮಾಡಿದ್ದು ಯಾವುದೇ ಮೋಸ ಆಗಿಲ್ಲ ಅನ್ನುವುದು ಸರಿಯಲ್ಲ. ಗಳಿಕೆ ರಜೆಯ ನಗದೀಕರಣಕ್ಕೆ ಅರ್ಜಿ ಕೊಟ್ಟಿದ್ದರೂ ಸಹ ಗಳಿಕೆ ರಜೆಯ ಹಣವನ್ನು ಬಿಲ್ಲು ಮಾಡಿ ಆರೋಪಿ ನಮ್ಮ ಖಾತೆಗೆ ಹಾಕಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ವೈಯಕ್ತಿಕ ಹಣದ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ